ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು,**
**ನೃಪತುಂಗ ರಸ್ತೆ, ಬೆಂಗಳೂರು**

**ಸಂಖ್ಯೆ : ಸಿ5(1)ಪ್ರ.ದ.ಸ.ಜೇ- /2015-16** **ದಿನಾಂಕ : 25/01/2016**

**ಸುತ್ತೋಲೆ**

ವಿಷಯ :- ಪ್ರಥಮ ದರ್ಜೆ ಸಹಾಯಕರ ಹುದ್ದೆಯ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

* * * * * *

(1) ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರಥಮ ದರ್ಜೆ ಸಹಾಯಕರ 1996 ರಿಂದ 2008 ರವರೆಗಿನ ಅವಧಿಯಲ್ಲಿ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಒಂದು ನೇರ ನೇಮಕಾತಿಯಿಂದ ಮತ್ತೊಂದು ನೇರ ನೇಮಕಾತಿಯ ಅವಧಿಯಲ್ಲಿ ಉದ್ಭವವಾಗುವ ಖಾಲಿ ಹುದ್ದೆಗಳಿಗೆ ನೇಮಕಗೊಳ್ಳುವ ಅಭ್ಯರ್ಥಿಗಳ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಯನ್ನು ಬ್ಲಾಕ್‌ವಾರು ಪ್ರಕಟಿಸಬೇಕಾಗಿರುವ ಹಿನ್ನೆಲೆಯಲ್ಲಿ 1996 ರಿಂದ 2015 ರವರೆಗಿನ ಅವಧಿಯಲ್ಲಿ ಪ್ರತಿ ಶಾಲೆ, ಕಛೇರಿಯಲ್ಲಿನ ಪ್ರಥಮ ದರ್ಜೆ ಸಹಾಯಕರ ಹುದ್ದೆಯು ಖಾಲಿಯಾದ ಹಾಗೂ ಭರ್ತಿಯಾದ ಬಗ್ಗೆ ಮಾಹಿತಿಯ ಅಗತ್ಯವಿದೆ..

(2) ಗುಲಬರ್ಗಾ ಹಾಗೂ ಧಾರವಾಡ ಅಪರ ಆಯುಕ್ತರು, ಇಲಾಖೆಯ ನಿರ್ದೇಶಕರುಗಳು ಅವರ ಕಛೇರಿಯ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಸಂಬಂಧಿಸಿದ ಮಾಹಿತಿಯನ್ನು ಕೆಳಕಂಡ ನಮೂನೆಯಲ್ಲಿ ದಿನಾಂಕ : 15/02/2016 ರೊಳಗಾಗಿ ಈ ಕಚೇರಿಗೆ ಸಲ್ಲಿಸಲು ಕೋರಲಾಗಿದೆ.

(3) ಆದ್ದರಿಂದ ರಾಜ್ಯದ ಎಲ್ಲ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ತಾಲ್ಲೂಕು, ಶೈಕ್ಷಣಿಕ ಬ್ಲಾಕ್‌ಗಳಲ್ಲಿ ಪ್ರತಿ ಶಾಲೆ ಹಾಗೂ ಕಛೇರಿಯಲ್ಲಿ ಮಂಜೂರಾಗಿರುವ ಪ್ರತಿಯೊಂದು ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಸಂಬಂಧಿಸಿದಂತೆ ದಿನಾಂಕ: 1-1-1986 ರಿಂದ 31-12-2015 ರವರೆಗಿನ ಅವಧಿಯಲ್ಲಿ (ಎ) ನಿವೃತ್ತಿ, (ಬಿ) ಬಡ್ತಿ, (ಸಿ) ಸ್ವಯಂ ನಿವೃತ್ತಿ, (ಡಿ) ಮರಣ **ಅಥವಾ** (ಇ) ವಜಾ ಈ ಕಾರಣಗಳಿಂದ ತೆರವಾದ ಹಾಗೂ ಭರ್ತಿಯಾದ ಖಾಲಿ ಹುದ್ದೆಗಳ ಮಾಹಿತಿಯನ್ನು ಈ ಕೆಳಕಂಡ ನಮೂನೆಯಲ್ಲಿ ಭರ್ತಿ ಮಾಡಿ ತಮ್ಮ ವ್ಯಾಪ್ತಿಯ ಜಿಲ್ಲಾ ಉಪ ನಿರ್ದೇಶಕರಿಗೆ ದಿನಾಂಕ : 20/02/2016 ರೊಳಗಾಗಿ ಸಲ್ಲಿಸಲು ಸೂಚಿಸಲಾಗಿದೆ.

**ನಮೂನೆ**

| ಕ್ರ. ಸಂ | ಶಾಲೆಯ ಅಥವಾ ಕಛೇರಿಯ ಹೆಸರು ಹಾಗೂ ವಿಳಾಸ | ಮಂಜೂರಾಗಿರುವ ಪ್ರ.ದ.ಸ. ಹುದ್ದೆಗಳ ಸಂಖ್ಯೆ | 1986 ರಿಂದ 2015 ರವರೆಗಿನ ಅವಧಿಯಲ್ಲಿ ಮಂಜೂರಾದ ಹುದ್ದೆಗಳಲ್ಲಿ ಬಡ್ತಿ/ ನಿವೃತ್ತಿ/ ಸ್ವಯಂನಿವೃತ್ತಿ / ಮರಣ / ವಜಾ ಕಾರಣಗಳಿಂದ ತೆರವಾದ ಪ್ರ.ದ.ಸ. ಹುದ್ದೆಗಳ ವಿವರ ಹಾಗೂ ಸಂಖ್ಯೆ | ಕಾಲಂ - 4 ರಂತೆ ಖಾಲಿ ಯಾದ ಹುದ್ದೆಯು ಭರ್ತಿಯಾದ ದಿನಾಂಕ | ಯಾವ ರೀತಿ ಹಾಗೂ ಯಾವ ವರ್ಗದಿಂದ ಭರ್ತಿಯಾಗಿದೆ (ನೇಮಕಾತಿ/ ಬಡ್ತಿ / ಅನುಕಂಪದ ನೇಮಕಾತಿ) |
|---|---|---|---|---|---|
| 1 | 2 | 3 | 4 | 5 | 6 |

(4) ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಸ್ವೀಕೃತವಾದ ಮಾಹಿತಿಯನ್ನು ಜಿಲ್ಲಾ ಉಪ ನಿರ್ದೇಶಕರು ತಾಲ್ಲೂಕುವಾರು ಕ್ರೋಢೀಕರಿಸಿ ಈ ಕಛೇರಿಗೆ ದಿನಾಂಕ : 28/02/2016 ರೊಳಗಾಗಿ ಮುಂದಿನ ನೆನಪೋಲೆಗಳಿಗೆ ಅವಕಾಶ ನೀಡದಂತೆ ತಪ್ಪದೇ ಸಲ್ಲಿಸಲು ತಿಳಿಸಿದೆ.

30/1/16

(ಕೆ.ಎಸ್. ಸತ್ಯಮೂರ್ತಿ)
ಆಯುಕ್ತರು

ಇವರಿಗೆ :-

1) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಸ ಮತ್ತು ಗುಲಬರ್ಗಾ.
2) ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರುಗಳಿಗೆ.
3) ಜಂಟಿ ನಿರ್ದೇಶಕರು, ಮೈಸೂರು ವಿಭಾಗ, ಬೆಳಗಾವಿ ವಿಭಾಗ ಹಾಗೂ ಮಧ್ಯಾಹ್ನ ಉಪಹಾರ ಯೋಜನೆ.
4) ರಾಜ್ಯದ ಎಲ್ಲ ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರುಗಳಿಗೆ.
5) ರಾಜ್ಯದ ಎಲ್ಲ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರುಗಳಿಗೆ.
6) ರಾಜ್ಯದ ಎಲ್ಲ ಜಿಲ್ಲೆಗಳ ಡಯಟ್ ಪ್ರಾಂಶುಪಾಲರುಗಳಿಗೆ.
7) ರಾಜ್ಯದ ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
8) ಕಛೇರಿ ಪ್ರತಿ.